ಗೊತ್ತಾಗುವುದಿಲ್ಲ. ಪ್ರೀತಿಸುವ ಅನುಭವಗಳಿಂದ ಅದನ್ನು ಕಂಡುಕೊಳ್ಳಲು ಸಾಧ್ಯವೆಂದು ಪ್ರೀತಿಯಲ್ಲಿ ಬಿದ್ದವನು ಹೇಳುತ್ತಾನೆ. ಅಂಥ ಪ್ರೇಮದ ಅನುಭೂತಿ ಎಷ್ಟು ಘನೀಭೂತವಾಗಿರುತ್ತದೆಯೋ? ಅದರಲ್ಲಿ ಮುಳುಗುವವರೆಗೆ ಒಂದು ಹೆಣ್ಣಿಗೆ ಒಂದು ಗಂಡಿಗೆ ಎಚ್ಚರವಿರುವುದಿಲ್ಲ. ಅಂತಹ ಪ್ರೇಮ ಮೋಹದ ನಿಶೆಯಿಂದ ಹೊರ ಬಂದಾಗ, ಗಿರಿಯ ಸಾಹಿತ್ಯವನ್ನು ಪ್ರೋತ್ಸಾಹಿಸುವ ಊರಿನ ಮಠದ ಸುಖಾನಂದ ಸ್ವಾಮಿಗಳ ಭಾವಚಿತ್ರದ ಮುಂದೆ ತಲೆ ಬಾಗಿ ಗಂಟೆಗಟ್ಟಲೆ ನಿಲ್ಲುತ್ತಿದ್ದ. ಹೇಳುತ್ತಿದ್ದ:

'ಸ್ವಾಮಿಗಳೇ, ನನ್ನನ್ನು ಹೆಣ್ಣಿನ ಪ್ರೇಮಪಾಶದಿಂದ ಬಿಡುಗಡೆಗೊಳಿಸುವಿರಾ?'

***

ಓದುಗರಿಗೆ ಈ ಕತೆಯಲ್ಲಿ ಬರುವ ಗಿರಿ ಆ ಹೆಣ್ಣನ್ನು ಪ್ರೀತಿಸುತ್ತಿರಲಿಲ್ಲವೇನೋ ಎಂಬ ಅನುಮಾನ ಹುಟ್ಟಬಹುದು. ಆದರೆ ಎಷ್ಟು ಉತ್ಸಾಹದಿಂದ ಆ ಹೆಣ್ಣನ್ನು ಗಿರಿ ಪ್ರೀತಿಸಿದ್ದನೋ ಅಷ್ಟು ಬೇರೆ ಯಾವ ಹೆಣ್ಣನ್ನೂ ಪ್ರೀತಿಸಿರಲಿಲ್ಲ. ಹೆಣ್ಣಿನ ಜೊತೆ ಕಳೆದ ಸಂವೇದನಾಶೀಲ ಮತ್ತು ವಾಸನಾಮಯ ರಾತ್ರಿಗಳ ನೆನಪು ಮುತ್ತುತ್ತಲೇ ಇಂದಿಗೂ ಅವನಲ್ಲಿ ಹೊಸ ಉತ್ತೇಜನ ಉಂಟಾಗುವುದಿದೆ. ಆ ಹೆಣ್ಣು ಗಿರಿಯ ಜೀವನಕ್ಕೆ ಅಂಟಿಕೊಂಡಷ್ಟು ಕಾಲವೂ ಆತ ಬದುಕನ್ನು ಕಟ್ಟಿಕೊಳ್ಳುತ್ತಾ ಇದ್ದ. ಒಬ್ಬ ಒಳ್ಳೆಯ ಕತೆಗಾರ ಅವನೊಳಗೆ ಬೇರುಬಿಟ್ಟಿದ್ದ. ಸಾಹಿತ್ಯಿಕ ಚಟುವಟಿಕೆ ಮತ್ತು ಅನುಷ್ಠಾನಗಳಲ್ಲಿ ತಲ್ಲೀನನಾಗಿರುತ್ತಿದ್ದ ಆ ದಿನಗಳೇ ಅವನ ನಿಜವಾದ ರೋಮಾಂಚನ. ಆದರೇನು? ಹಗಲು ಕುರುಡಾಗುತ್ತಲೇ ಬುಡಮೇಲು ಜಿರಲೆಯಂತೆ, ಒಬ್ಬ ಅಂಗವಿಕಲನಂತೆ ಒದ್ದಾಡುತ್ತಿದ್ದ. ಆಗೆಲ್ಲಾ ಅದೇ ಆತನ ವಾಸ್ತವಿಕ ಭ್ರಮಾಲೋಕವೆನಿಸುತ್ತಿತ್ತು. ಅವನು ಬರೆಯುತ್ತಿದ್ದ ಒಂದೊಂದು ಕತೆಗಳಲ್ಲೂ ಒಂದೊಂದು 'ಹೆಣ್ಣು' ಜೀವಂತವಾಗಿರುತ್ತಿದ್ದಳು. ಒಟ್ಟಿನಲ್ಲಿ ಗಿರಿಯೊಳಗಿನ ಕತೆಗಾರನ ಜೀವನವೇ ಕತೆಯೆನಿಸುತ್ತಿತ್ತು.

ಗಿರಿಗೆ ಬಾಹ್ಯ ಜಗತ್ತಿನೊಡನೆ ನೇರವಾದ ಸಂಬಂಧ ಕಲ್ಪಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಚೆಡ್ಡಿ ಹಾಕದ ಆತನ ಬಾಲ್ಯಾವಸ್ಥೆಯಿಂದ ಹಿಡಿದು ಈಗ ಬೇಕಾದಾಗಲೆಲ್ಲಾ ಚೆಡ್ಡಿ ಹಾಕಿಕೊಳ್ಳುವವರೆಗಿನ ಯೌವನಾವಸ್ಥೆಯನ್ನು ಗ್ರಹಿಸಿದಾಗ ಅವನಿಗೇ ಅಚ್ಚರಿಯಾಗುತ್ತಿತ್ತು. ಓದು ಮತ್ತು ಸಾಹಿತ್ಯದಲ್ಲಿ ತೊಡಗಿಸಿಕೊಳ್ಳುವ ಪ್ರತಿಕ್ಷಣವೂ ಆ ಹೆಣ್ಣನ್ನು ಕಂಡುಕೊಂಡ. ಗಿರಿಯ ಕಥಾಪ್ರಪಂಚ ತುಂಬಾ ವಿಶಾಲವಾಗಿತ್ತು. ಕತೆಗಾರನಾಗಿ ಗುರುತಿಸಿಕೊಂಡ ನಂತರ 'ಪರಿಪೂರ್ಣವಾಗಿ ಕಥೆಗಾರ'ನಾಗಲು ಸಾಧ್ಯ ಆಗಲಿಲ್ಲ. ಒಂದೆರಡು ಬಾರಿ ಆತನ ವೃದ್ಧ, ಅಶಕ್ತ ತಾಯಿಯನ್ನು ಭೇಟಿಯಾಗಲು ಹೋದದ್ದುಂಟು. ಅವನು ಒಳಗಿನ ಪ್ರಪಂಚಕ್ಕಿಂತ ಹೊರಗಿನ ಪ್ರಪಂಚವನ್ನು ಪ್ರವೇಶಿಸುತ್ತಿದ್ದಾಗ ಅಧೀರನಾಗುತ್ತಿದ್ದ. ಹೊರಗಿನ ಪ್ರಪಂಚವೆಂಬುದು ಶೂನ್ಯ ಜಗತ್ತೆಂದು ಗಿರಿಯ ಅಭಿಪ್ರಾಯ.

ಗಿರಿಯನ್ನು ಅಷ್ಟು ವರ್ಷಗಳವರೆಗೆ ಪ್ರೇಮಪಾಶದಲ್ಲಿ ಬಂಧಿಸಿಟ್ಟ ಆ ಹೆಣ್ಣು ಮತ್ತು ಗಿರಿಯಲ್ಲಿ ಉಂಟಾದ ಆ ಸ್ಪರ್ಶ ಆತನಿಂದ ಮರೆಯಲಾಗಿಲ್ಲ. ಇವೆಲ್ಲಾ ಗಿರಿ ಕತೆಗಾರನಾಗಿ ಸಮಾಜದಲ್ಲಿ ಗುರುತಿಸಿಕೊಳ್ಳಲು ಕಾರಣರಾದ ಮಠದ ಸ್ವಾಮಿಗಳಿಂದ ಆಶೀರ್ವಾದವನ್ನು ಪಡೆಯುವುದಕ್ಕೆ ಹೋಗಿದ್ದಾಗಲೇ ಘಟಿಸಿದ್ದು. ಸ್ವಾಮಿಗಳು ಆಶೀರ್ವದಿಸುತ್ತಿದ್ದಾಗ ಗಿರಿ ಅವರ ಪಾದಕ್ಕೆ ಎರಗಿದ್ದ. ಅವರ ಆಶೀರ್ವಾದ ಪೂರ್ಣವಾಗುತ್ತಲೇ ಗಿರಿ ತಲೆ ಮೇಲೆತ್ತಿದಾಗ ಕಂಡ ದೃಶ್ಯದಿಂದ ದಿಗ್ಭ್ರಾಂತನಾಗಿದ್ದ! ಗಿರಿಗೆ ಎದುರಾಗಿ ಸ್ವಾಮಿಗಳ ಮಠದ ದೊಡ್ಡ ಕಬ್ಬಿಣದ ಗೇಟು ಮತ್ತು ಮುಂದಿನ ತೆಂಗು ಕಂಗುಗಳ ವಿಶಾಲದ ಹಚ್ಚಹಸುರಿನ ತೋಟ. ಒಂದು ಹೆಣ್ಣಿನ ಆಕೃತಿ ತೋಟದ ಬೇಲಿಯ ದಣಪೆಯ ಬಳಿ ನಿಂತಿರುವಂತೆ ಗಿರಿಗೆ ಗೋಚರಿಸಿತು. ಆ ಹೆಣ್ಣಿನ ಆಕೃತಿ ಒಂದು ಕ್ಷಣ ತಡೆದು; ಅರೆಕ್ಷಣ ನಿಂತು; ತದೇಕದೃಷ್ಟಿಯಿಂದ ಗಿರಿಯನ್ನು ನೋಡಿದ್ದನ್ನೂ ಕಂಡ...!

ಆತ ಹೊರ ಬರುತ್ತಿದ್ದಂತೆ ಆ ಹೆಣ್ಣಿನ ಆಕೃತಿ ಮೆಲ್ಲಮೆಲ್ಲನೆ ಪಕ್ಕದ ತೆಂಗಿನ ತೋಟದ ಕೆಲಸದ ಆಳುಗಳೊಂದಿಗೆ ಸೇರಿಕೊಂಡಿತು. ಆದರೆ ಗಿರಿಗೆ ಅವಳೊಬ್ಬಳೇ ಹೆಣ್ಣಾಗಿ ಕಂಡುಬರುತ್ತಾಳೆ. ಗಿರಿ ಆ ಹೆಣ್ಣನ್ನು ವರ್ಣನೆ ಮಾಡಲು ಅಸಮರ್ಥ. ಕತೆಗಾರ ಅಥವಾ ಸಾಹಿತ್ಯ ಪ್ರೇಮಿಯಾಗಿದ್ದರೂ ಹೆಣ್ಣಿನ ಅಪ್ರತಿಮ ಸೌಂದರ್ಯ ವರ್ಣಿಸಲು ಅವನ ಬಳಿ ಪದಗಳಿಲ್ಲ. ಒಂದು ವೇಳೆ ಅಪೂರ್ವ ಕಲಾಕಾರನಾಗಿದ್ದರೂ, ಅವಳ ಸ್ವರ್ಗೀಯ ರೂಪದ ರೇಖೆಯನ್ನು ಮನದ ಕ್ಯಾನ್‌ವಾಸಿನಲ್ಲಿ ಬಿಡಿಸಲು ಅಸಹಾಯಕನಾಗಿದ್ದ ಆದರೂ ಇಷ್ಟಂತೂ ಹೇಳಲು ಅಡ್ಡಿಯಿಲ್ಲ. ಆ ಹೆಣ್ಣು ದೇವಲೋಕದಿಂದ ಇಳಿದು ಬಂದ ಅಪ್ಸರೆಯಂತಿದ್ದಳು. ಮಾತ್ರವಲ್ಲ, ಅವಳ ಅಂಗಪ್ರತ್ಯಂಗಗಳು ಅಚ್ಚಿನಲ್ಲಿ ಎರಕ ಹೊಯ್ದಂತೆ ಇದ್ದವು. ಆಕೆ ಒಬ್ಬ ರಂಭೆ ಊರ್ವಶಿಯಂತಿದ್ದಳು. ಪುರುಷನ ಮೋಹಿಸುವ ದರ್ಶಿಸುವ ಆ ಹೆಣ್ಣಿನ ಸೌಂದರ್ಯವಂತೂ ಗಿರಿಯ ತಲೆಯನ್ನು ಗಿರಗಿರನೆ ತಿರುಗಿಸಿತು. ಆ ಹೆಣ್ಣನ್ನು ನೋಡುತ್ತಿರುವಂತೆ ಗಿರಿಯ ಒಳಗಿನ ಮನದ ಬಾಗಿಲಿನ ಕದ ತೆರೆದಂತೆ ಆತನಿಗೆ ಭಾಸವಾಯಿತು. ಅಪರಿಚಿತ ದೃಶ್ಯವೊಂದು ಕಾಣಬರತೊಡಗಿತು. ಆಗಲೇ ಒಂದು ವಿಚಿತ್ರ ಘಟನೆ ನಡೆಯಿತು! ಕವಿತೆಯ ಸಮಾನ ಅಭಿವ್ಯಂಜಕವಾದ ಅವಳ ನಯನಗಳು ಪಟಪಟನೆ ರೆಪ್ಪೆ ಬಡಿದವು:

'ಕಾಣದ ದೇವರಿಗೆ ಶರಣಾಗುವುದರ ಬದಲು ನೀನು ನನಗೆ ಶರಣಾಗು. ನಿನ್ನ ಕಲ್ಪನಾತೀತ ಪ್ರೇಮ ಸುಖಕ್ಕಾಗಿ ನನ್ನನ್ನು ಮನಸಾರೆ ಪ್ರೇಮಿಸು. ಮೊದಲು ಕತೆಗಾರನ ಮುಖವಾಡ ಕಳಚಿಬಿಡು. ನನ್ನ ಬಳಿ ಬಂದರೆ ನಿನಗೆ ಏನೂ ಇಲ್ಲ ತೊಂದರೆ. ನನ್ನ ಚಿರಯೌವನವನ್ನೂ ಉನ್ನತ್ತ ಸೌಂದರ್ಯವನ್ನೂ ನಿನಗಿದೋ ಉಣಬಡಿಸುವೆ. ಕತೆಗಾರನಾಗಿ ನಾನು ನಿನಗೆ ಕುಡಿಸುವ ಪ್ರೇಮದ ಮದಿರೆಯನ್ನು ಸವಿಯಲು ನಿನಗೆ ಅರ್ಪಿಸುವೆ. ನೀನು ನಿಜವಾದ ಗಂಡಸಾಗಿದ್ದರೆ ನನ್ನ ಬಳಿಗೆ ಬಂದುಬಿಡು. ಬಾ, ನನ್ನ ಬಳಿ ಬಾ... ನಿನ್ನನ್ನು ಕನಸಿನ ಬೀಸಣಿಗೆಯಲ್ಲಿ ಕುಳ್ಳಿರಿಸಿಕೊಂಡು ಮೋಹಿಸುವೆ... ಯೌವನ ಮತ್ತು ಸೌಂದರ್ಯ ಎಲ್ಲಿಯವರೆಗೆ ಶಾಶ್ವತವೆಂದು ನಿನ್ನನ್ನು ಪ್ರೇಮಲೋಕದತ್ತ ಕೊಂಡೊಯ್ದು ನನ್ನನ್ನು ಅಪಹರಿಸಲು ನಿನಗೆ ಅನುಕೂಲ ಮಾಡಿಕೊಡುವೆ...' ಹೀಗೆ ಮಾತನಾಡಿದಂತೆ ಭಾಸವಾಗಿ ಗಿರಿ ರೋಮಾಂಚಗೊಂಡ.

ಗಿರಿಯ ನಿಜವಾದ ಸ್ಥಿತಿ ವಿಚಿತ್ರವಾಗಿತ್ತು. ಆತನಿಗೆ ಆ ಹೆಣ್ಣಿನ ಈ ಮಧುರವಾದ ಶಬ್ದಗಳನ್ನು ಬಿಟ್ಟು ಬೇರೇನೂ ಕೇಳಿಸಲಿಲ್ಲ. ಅದೇ ಕ್ಷಣ ಕ್ಷಣವೂ ಆತನ ಕಿವಿಗಳಲ್ಲಿ ಪ್ರತಿಧ್ವನಿಸುತ್ತಿತ್ತು. ಹೆಣ್ಣನ್ನು ಬಿಟ್ಟು ಆತನ ಕಣ್ಣುಗಳಿಗೆ ಬೇರೆ ಯಾವುದೇ ವಸ್ತುಗಳೂ ಕಾಣುತ್ತಿರಲಿಲ್ಲ. ಗಿರಿ ಹೇಗೋ ಕತೆಗಾರನಾದ. ಸಾಹಿತ್ಯದ ಸೇವೆಯನ್ನು ನಿರ್ವಹಿಸುವ ಸಮಯದಲ್ಲಿ ಮಾತ್ರ ಕತೆಗಾರ. ಉಳಿದ ಸಮಯದಲ್ಲಿ ಆತನಿಗೆ ಹೆಚ್ಚಾಗಿ ತಾನು ಮಾಡಬಾರದಂತಹ ಯಾವುದೋ ಕೆಲಸವನ್ನು ಮಾಡುತ್ತಿರುವಂತೆ ಅನ್ನಿಸುತ್ತಿತ್ತು. ಆತನಿಗೆ ತಾನು ಯಾವುದೋ ಪ್ರೇಮದ 'ತಪ್ಪು' ಮಾಡುತ್ತಿರುವಂತೆ ಭಾಸವಾಗುತ್ತಿತ್ತು. ಆ ಹೆಣ್ಣಿನ ನೆನಪಾದಾಗಲೆಲ್ಲಾ ಮನೆಯಲ್ಲಿ ಗಿರಿಗೆ ಉಸಿರು ಕಟ್ಟಿದಂತಾಗುತ್ತಿತ್ತು. ಎಷ್ಟೋ ಸಲ ಪದೇ ಪದೇ ಬರೆದದ್ದನ್ನೆಲ್ಲವನ್ನೂ ಮತ್ತೆ ಮತ್ತೆ ಹರಿದು ಹಾಕುತ್ತಿದ್ದ. ಹರಿದು ಹಾಕಿದ ಕಾಗದ ತುಂಡುಗಳನ್ನು ಗುಡ್ಡೆ ಹಾಕುತ್ತಿದ್ದ. ಆ ರಾಶಿಗೆ ಬೆಂಕಿ ಹಚ್ಚುತ್ತಿದ್ದ. ಕೊನೆಗೆ ಬೂದಿಯನ್ನು ಆರಿಸಿಕೊಂಡು ಹೊರಗಿನ ತೆಂಗಿನ ಮರದ ಬುಡಕ್ಕೆ ಎಸೆಯುತ್ತಿದ್ದ. ಗಿರಿಗೆ ಆ ಹೆಣ್ಣಿನ ಬಾಹುಗಳಲ್ಲಿ ಕರಗುವ ದಾಹದ ನಾಲಿಗೆ ಉದ್ದುದ್ದವಾಗುತ್ತಿತ್ತು. ಆದರೆ ಆಕೆ ಗಿರಿಯೊಡನೆ ಅಪ್ರಸನ್ನತೆಯಿಂದಿದ್ದಳು. ಅದಕ್ಕೆ ಗಿರಿ ಆಕೆಯ ಮಾತನ್ನು ಕೇಳದೆ ಕತೆಗಾರನಾದದ್ದು.

ರಾತ್ರಿಯ ರಂಗಸ್ಥಳದಲ್ಲಿ ಅವನೊಳಗಿನ 'ದಾಹ' ಭೋರ್ಗರೆಯುವ ಸಮುದ್ರದ ತೆರೆಯಾಗುತ್ತಿತ್ತು. ಆಗ ಏಕಾಂತದಲ್ಲಿ ಬಂದು ಗಿರಿಯ ಕೈ ಹಿಡಿದು ಕಿವಿಯಲ್ಲಿ ಪಿಸುಗುಡುತ್ತಾಳೆ ಆ ಹೆಣ್ಣು:

'ಕತೆಗಳಿಂದ ನೀನು ಕೇವಲ ಹೆಸರನ್ನಷ್ಟೇ ಸಂಪಾದಿಸುತ್ತಿ. ಆದರೆ ಕತೆಗಳಿಂದ ಸುಖ ಸಂಪತ್ತನ್ನು ಸಂಪಾದಿಸಲು ನಿನ್ನಿಂದ ಸಾಧ್ಯವಾಗದು. ಕತೆಗಾರನಾಗಿ ನೀನು ದುಃಖಿಯಾಗುವುದನ್ನು ನನ್ನಿಂದ ನೋಡಲು ಆಗುತ್ತಿಲ್ಲ. ನೀನು ಅವರಿವರು ಮದುವೆಯಾದ ಹೆಣ್ಣುಗಳನ್ನೋ, ಮದುವೆಯಾಗದ ಹುಡುಗಿಯರನ್ನೋ, ಇನ್ನೊಬ್ಬರ ಹೆಂಡತಿಯರನ್ನೋ ಕಲ್ಪಿಸಿಕೊಂಡು ಕತೆಗಳಲ್ಲೇ ಸುಖಿಸಿಕೊಂಡು ಸುಮ್ಮನೆ ನಿನ್ನ ಯೌವನವನ್ನು ವ್ಯರ್ಥ ಮಾಡಿಕೊಳ್ಳುತ್ತಿದ್ದಿ. ನಿನ್ನೊಳಗೆ ನಿಗಿನಿಗಿ ಸುಡುತ್ತಿರುವ ಪ್ರೇಮದ ಕೆಂಡವನ್ನು ಮೊದಲು ತಣ್ಣಗೆ ಮಾಡಿಕೋ. ಸಂಪೂರ್ಣ ಮನಸ್ಸಿನಿಂದ ನನ್ನನ್ನು ನಿನ್ನವಳನ್ನಾಗಿ ಮಾಡಿಕೊಳ್ಳುವುದಾದರೆ ನಿನಗಾಗಿ ಹಗಲಿರುಳು ಕಾಯುವೆನು. ಅದು ಬಿಟ್ಟು ಅವಳ ಕತೆ ಇವಳ ಕತೆ ಅಂತ ಬರೆಯುತ್ತಾ ಬರೆಯುತ್ತಾ ನೀನೇ ಒಂದು ಕತೆಯಾಗುತ್ತಾ ದುಃಖಿಯಾಗಿ ನರಕಾಗ್ನಿಯಲ್ಲಿ ಬೆಂದು ಹೋಗಬೇಡ. ಸ್ವರ್ಗ ಸುಖವನ್ನು ಪಡೆಯಲು ಬಯಸಿದರೆ ನೀನು ಎಲ್ಲವನ್ನೂ ಬಿಟ್ಟು ನನ್ನ ಬಳಿಗೆ ಬಂದುಬಿಡು. ನನ್ನನ್ನೇ

